**4 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,
ತುಮಕೂರು-ಮಧುಗಿರಿ**

**ಎಸ್.ಸಿ.ಸಂಖ್ಯೆ:** 5037/2023 ಫ್ರಾಸಾ-20
ಚಾಸಾ-14

ದಿನಾಂಕಃ 26-05-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

| | |
|---|---|
| **ಹೆಸರು** | ನರಸಿಂಹಮೂರ್ತಿ |
| **ತಂದೆಯ / ಗಂಡನ ಹೆಸರು** | ವೀರಪ್ಪ |
| **ವಯಸ್ಸು** | 40 |
| **ಉದ್ಯೋಗ** | ಅತಿಥಿ ಶಿಕ್ಷಕರು , ಸೂಲನಾಯಕನಹಳ್ಳಿ |
| **ವಾಸಸ್ಥಳ** | ಕೆ. ರಾಂಪುರ , ಹಾಲಿ ಚಿಕ್ಕಹಳ್ಳಿ |

**ಮುಖ್ಯ ವಿಚಾರಣೆ ಸರ್ಕಾರಿ ಅಭಿಯೋಜಕರಿಂದ ಃ-**

2017 ನೇ ಇಸವಿಯಲ್ಲಿ ನಾನು ಅನುಷ ಎನ್ನುವವರ ಜೊತೆ ಮದುವೆಯಾಗಿದ್ದೆ. ಮದುವೆಯಾದ 2 ದಿನಕ್ಕೆ ಅನುಷ ಬೇರೆಯವರೆ ಜೊತೆ ಹೋಗಿರುತ್ತಾಳೆ. ನಾನು ಸೂಲನಾಯಕನಹಳ್ಳಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಅತಿಥಿ ಶಿಕ್ಷಕನಾಗಿ ಕೆಲಸ ಮಾಡುತ್ತಿದ್ದ ಸಮಯದಲ್ಲಿ ಲಕ್ಷ್ಮೀ ರವರ ತಾಯಿ ಅಂಗನವಾಡಿ ಸಹಾಯಕಳಾಗಿ ಕೆಲಸ ಮಾಡಿಕೊಂಡಿದ್ದಳು. ಲಕ್ಷ್ಮೀ ರವರ ತಾಯಿ ತೀರಿಕೊಂಡಿರುತ್ತಾಳೆ. ಲಕ್ಷ್ಮೀ ರವರು ನನಗೆ ಎರಡು ಬಾರಿ ಫೋನ್ ಮಾಡಿ ಕೆಲಸದ ಬಗ್ಗೆ ವಿಚಾರ ಮಾಡಿರುತ್ತಾಳೆ. ಲಕ್ಷೀಯ ಗಂಡ ನನಗೆ ದಿ.15.08.2023 ರಂದು ಬೆಳಿಗ್ಗೆ 7-30 ಗಂಟೆ ಫೋನ್ ಮಾಡಿ ಕೆಟ್ಟದಾಗಿ ಬೈದಿದ್ದ. ನಾನು ಅವನಿಗೆ ಲಕ್ಷ್ಮೀ ನನಗೆ ಕೆಲಸದ ಬಗ್ಗೆ ಮಾತ್ರ ಮಾತನಾಡಿರುತ್ತಾಳೆ ನಾನು ಅವಳ ಜೊತೆ ಬೇರೆ ಏನೂ ಮಾತನಾಡಿರುವುದಿಲ್ಲ. ತುರುವೆಕೆರಯ ದಿಗ್ವಿಜಯ ಕಾಲೇಜಿಗೆ ಬಿ.ಎಡ್. ನ ಪರೀಕ್ಷೆಗಾಗಿ ಹಾಲ್ ಟಿಕೇಕ್ ಪಡೆದುಕೊಳ್ಳಲು ಹೋಗಿದ್ದೆ. ಆ ಸಮಯದಲ್ಲಿ ನನಗೆ ಲಕ್ಷ್ಮೀ ರವರ ಕೊಲೆ ಆಗಿದೆ ಎಂದು ತಿಳಿಯಿತು. ಈ ಬಗ್ಗೆ ಪೊಲೀಸರು ನನಗೆ ದಿ.08.09.2023 ರಂದು ವಿಚಾರ ಮಾಡಿ ನನ್ನ ಹೇಳಿಕೆ ತೆಗೆದುಕೊಂಡಿರುತ್ತಾರೆ.

ದಿ. 03.11.2023 ರಂದು ಪೊಲೀಸರು ನನ್ನ ಫೋನ್‌ನನ್ನು ಪಾವಗಡ ವೃತ್ತ ನಿರೀಕ್ಷಕರ ಕಚೇರಿಗೆ ಹೋಗಿ ಕೊಟ್ಟಿರುತ್ತೇನೆ. ಆ ಸಮಯದಲ್ಲಿ ಪೊಲೀಸರು ನನ್ನ ಸಹಿ ತೆಗೆದುಕೊಂಡಿರುತ್ತಾರೆ. ನ್ಯಾಯಾಲಯದಲ್ಲಿರುವ ಅಮಾನತ್ತು ಪಂಚನಾಮೆಯನ್ನು ನೋಡಿದೇನು ಅದರಲ್ಲಿ ನನ್ನ ಸಹಿ ಇರುತ್ತದೆ ಅದನ್ನು ಗುರುತಿಸುತ್ತೇನೆ. ಸದರಿ ಅಮಾನತುತ ಪಂಚನಾಮೆಯನ್ನು ನಿಪಿ-18 ಎಂದು, ಸಾಕ್ಷಿ ಸಹಿಯನ್ನು ನಿಪಿ-18(ಎ) ಎಂದು ಗುರುತಿಸಲಾಯಿತು. ನನ್ನ ಮೊಬೈಲ್ ನ್ನು ನೋಡಿದರೆ ಗುರುತಿಸುತ್ತೇನೆ. ನ್ಯಾಯಾಲಯದ ಮುಂದೆ ಇರುವ ಮೊಬೈಲ್ ನ್ನು ನೋಡಿ ಗುರುತಿಸಿರುತ್ತಾರೆ. ಸದರಿ ಮೊಬೈಲ್ ನ್ನು ಮು.ಮಾ-2 ಎಂದು ಗುರುತಿಸಲಾಯಿತು. ಸದರಿ ಮೊಬೈಲ್ ವಿವೂ ಕಂಪನಿಯದ್ದು ಇದ್ದು ಅದರ ಸಿಮ್ ಜಿಯೋ ಕಂಪನಿಯದು ಇರುತ್ತದೆ. ನನ್ನ ಮೊಬೈಲ್ ನಂ-8197592275 ಇರುತ್ತದೆ.

**<u>ಪಾಟೀಸವಾಲು ಶ್ರೀ. ಪಿ.ಎನ್.ಆರ್. ವಕೀಲರಿಂದ ಆರೋಪಿ ಪರವಾಗಿ:-</u>**

ನಾನು 2018 ರಿಂದ ಅತಿಥಿ ಶಿಕ್ಷಕನಾಗಿ ಕೆಲಸ ಮಾಡುತ್ತಿದ್ದೇನೆ. ನಾನು 2018 ರಿಂದ 2020 ರವರೆಗೆ ಗೊಲ್ಲರಹಟ್ಟಿಯಲ್ಲಿ ಅತಿಥಿ ಶಿಕ್ಷಕನಾಗಿ ಕೆಲಸ ನಿರ್ವಹಿಸಿರುತ್ತೇನೆ. ನಾನು ಅತಿಥಿ ಶಿಕ್ಷಕನಾಗಿ ಗೊಲ್ಲಹಟ್ಟಿಯಲ್ಲಿ ಕೆಲಸ ಮಾಡುತ್ತಿದ್ದಾಗ ಚಿಕ್ಕಹಳ್ಳಿಯಲ್ಲಿ ವಾಸ ಮಾಡುತ್ತಿದ್ದೆ. ಚಿಕ್ಕಹಳ್ಳಿಯಿಂದ ಗೊಲ್ಲಹರಟ್ಟಿ 15-16 ಕಿ.ಮೀಟರ್ ಅಂತರ ಇರುತ್ತದೆ. ನಾನು ಗೊಲ್ಲರಹಟ್ಟಿಯಲ್ಲಿ 9-50 ರಿಂದ 4-30 ರವರೆಗೂ ಕೆಲಸ ಮಾಡುತ್ತಿದ್ದೆ. ಶಾಲೆಯ ವಿಚಾರ ಬಿಟ್ಟು ಹೊರಗಡೆ ಯಾವುದೇ ಕೆಲಸ ಮಾಡುತ್ತಿರಲಿಲ್ಲ. ಬೇರೆ ಯಾವುದೇ ವಿಚಾರವನ್ನು ನಾನು ತಿಳಿದುಕೊಂಡಿರುವುದಿಲ್ಲ. 2021 ರಲ್ಲಿ ಲಕ್ಷ್ಮೀ ರವರ ತಾಯಿ ಕೆಲಸ ಮಾಡುತ್ತಿದ್ದು ಅವಳ ಹೆಸರು ನನಗೆ ಗೊತ್ತಿರುವುದಿಲ್ಲ. ಲಕ್ಷ್ಮೀ ರವರ ತಾಯಿಯ ಊರು ಸೂಲನಾಯಕನಹಳ್ಳಿ, ಲಕ್ಷ್ಮೀ ರವರ ತಾಯಿ ಬದುಕಿದ್ದಾಳೋ ಅಥವಾ ಸತ್ತಿದ್ದಾಳೆ ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ಲಕ್ಷ್ಮೀ ರವರ ತಾಯಿ ಸಾವಿಗೆ ಏನು ಕಾರಣ ಎಂದು ನನಗೆ ಗೊತ್ತಿಲ್ಲ. ಲಕ್ಷ್ಮೀ ರವರ ತಾಯಿ ಅಂಗನವಾಡಿಯಲ್ಲಿ ಕೆಲಸ ಮಾಡುತ್ತಿದ್ದಳು ಎಂದು ನಾನು ಪೊಲೀಸರ ಮುಂದೆ ಹೇಳಿರುವುದಿಲ್ಲ.

ಲಕ್ಷ್ಮೀ ಯಾವ ಕಾರಣಕ್ಕಾಗಿ ಮತ್ತು ಯಾವ ರೀತಿ ಮೃತಪಟ್ಟಿರುತ್ತಾಳೆಂದು ನಾನು ಹೇಳಿಕೆ ಕೊಟ್ಟಿರುವುದಿಲ್ಲ ಎಂದರೆ ನಿಜ. ಲಕ್ಷ್ಮೀ ಸಾವಿನ ಬಗ್ಗೆ ನನಗೆ ಯಾರು ತಿಳಿಸಿದರು ಎಂದು ನನಗೆ ಹೇಳಲು ಆಗುವುದಿಲ್ಲ. ಲಕ್ಷ್ಮೀ ರವರ ಗಂಡ ಯಾವ ಮೊಬೈಲ್ ಸಂಖ್ಯೆಯಿಂದ ನನಗೆ ಫೋನ್ ಮಾಡಿದ್ದಾರೆಂದು ನನಗೆ ಗೊತ್ತಿಲ್ಲ ಮತ್ತು ಈ ಬಗ್ಗೆ ಪೊಲೀಸರಿಗೆ ಹೇಳಿಕೆ ಕೊಟ್ಟಿರುವುದಿಲ್ಲ. ನಾನು ಪೊಲೀಸ್ ಠಾಣೆಯಲ್ಲಿ ಹೇಳಿಕೆ ಕೊಟ್ಟಿರುತ್ತೇನೆ. ನಾನು ಸಿ.ಪಿ.ಐ ಕಚೇರಿಗೆ ಹೋಗಿಲ್ಲ ಎಂದರೆ ನಾನು ಸಿ.ಪಿ.ಐ ಕಚೇರಿಯಲ್ಲಿಯೇ ಹೇಳಿಕೆ ಕೊಟ್ಟಿರುತ್ತೇನೆ. ಮು.ಮಾ-2 ಮೊಬೈಲ್ ನನ್ನದು ಎಂದು ತೋರಿಸಲು ಯಾವುದೇ ದಾಖಲೆ ಇಲ್ಲ ಎಂದರೆ ನಿಜ. ಮು.ಮಾ-2 ಮೊಬೈಲ್ ನನ್ನದು ಎಂದು ತೋರಿಸಲು ಪೊಲೀಸರಿಗೆ ಯಾವುದೇ ದಾಖಲೆ ಕೊಟ್ಟಿರುವುದಿಲ್ಲ. ಮು.ಮಾ-2 ಮೊಬೈಲ್ ನನ್ನದು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಪ್ರಕರಣಕ್ಕೂ , ನನಗೂ ಮತ್ತು ಲಕ್ಷ್ಮೀಗೂ ಯಾವುದೇ ಸಂಬಂಧ ಇಲ್ಲ ಎಂದರೆ ನಿಜ. ಲಕ್ಷ್ಮೀ ಗಂಡನಿಗೂ ಮತ್ತು ನನ್ನ ಮಧ್ಯೆ ಯಾವುದೇ ದ್ವೇಷ ಇಲ್ಲ ಎನ್ನುವುದು ನಿಜ. ಲಕ್ಷ್ಮೀ ನನಗೆ ಯಾವುದೇ ರೀತಿ ಸಂಪರ್ಕ ಮಾಡಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

**ಒ ತಿ ಹೇ ಸ ಇದೆ.**

**4 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**

**ತುಮಕೂರು-ಮಧುಗಿರಿ.**